ಕಥೆ

# ಸಕುಂತ

■ ಭಾರತಿ ಹಾದಿಗೆ

ಶ್ರಾವಣ ಮಾಸದ ಹೂ ಬಿಸಿಲು. ಮೋಡದ ಮರೆಯಲ್ಲಿ ಆಗಾಗ ಕಣ್ಣಾಮುಚ್ಚಾಲೆ ಆಡುತ್ತಿದ್ದ ಸೂರ್ಯ. ಬಣ್ಣಬಣ್ಣದ ಲಂಗ, ರವಿಕೆ ತೊಟ್ಟುಕೊಂಡು ಓಡುತ್ತ ನಡೆಯುತ್ತಾ 'ಎಲ್ಲಿ ಬಸ್ ಮಿಸ್ಸಾಗುತ್ತೋ?' ಎಂದು ಮಾತನಾಡಿಕೊಳ್ಳುತ್ತಾ ಸಾಗುವ ಕಾಲೇಜು ಹುಡುಗಿಯರು. ಮನೆಗಳಿಂದ ಬರುವ ಹಲಸಿನ ಹಣ್ಣಿನ ದೋಸೆಯ ಪರಿಮಳ. ಅಂಗಳಗಳಲ್ಲಿ, ನೋಡಿದರೆ ನೋಡುತ್ತಲೇ ನಿಂತಲ್ಲೇ ನಿಂತು ಬಿಡಬೇಕೆನಿಸುವ ಬಣ್ಣಬಣ್ಣದ ರಂಗೋಲಿಗಳು. ಮತ್ತೊಂದು ಕಡೆ ಸೇವಂತಿಗೆ ಹೂವುಗಳ ಕಾರುಬಾರು. ಹೀಗೆ ಶ್ರಾವಣ ಮಾಸದ ಸೊಬಗನ್ನು ಮನಸಾರೆ ಸವಿಯುತ್ತ ವಿಜಯಕ್ಕ ದೇವಸ್ಥಾನ ಸೇರಿದಾಗ ಗಂಟೆ ಎಂಟಾಗಿತ್ತು. ಹೊಸದಾಗಿ ಮದುವೆಯಾದ ಗಂಡು–ಹೆಣ್ಣು ಪೂಜೆ ಮುಗಿಸಿ ದೇವಸ್ಥಾನ ಸುತ್ತಿ ಬರುತ್ತಿದ್ದರು.

'ಎಲ್ಲ ನಮ್ಮ ಸಕುಂತ ಇದ್ದಂಗೆ ಇದಳೆ. ಮದ್ಲಿಗಿತ್ತಿ ಕಣ್ಣು, ಮೂಗು, ನಡಿಯದು ಅವಳಂಗೆಯ. ಯಾಕ ಕಾಣೆ, ನಿನ್ನೆ ರಾತ್ರಿ ಸ್ವಪ್ನದಲ್ಲಿ ಸಕುಂತ ಕಾಣಿಸಿಗ್ಯದ್ಲು. ಹ್ಯಂಗಿದಳಾ ಎನ? ನಮ್ಮ ಸಕುಂತಗೇನು ದೇವರು ಕಮ್ಮಿ ರೂಪ ಕೊಟ್ಟುರ್ಲ್ಲಲ್ಲ. ಯಾರೇ ಆದರೂ ನಿಂತು ನೋಡಬೇಕು ಅವಳನ್ನು ಅಂತಾ ರೂಪ ದೇವರು ಕೊಟ್ಟುತ್ತು. ನಮ್ಮಮ್ಮ ಯಾವಾಗ್ಲೂ ನನ್ನ ಹೊಟ್ಟೇಲಿ ಇಷ್ಟು ಚಂದದ ಮಕ್ಳು ಹುಟ್ತವೆ ಅಂತ ನಂಗೆ ಗೊತ್ತೆ ಇರಲಿಲ್ಲ ಅನ್ನುತ್ತಿದ್ದರು.'

'ಏನ್ ವಿಜಿಯಮ್ಮಾ ಎಷ್ಟು ವರ್ಷ ಆಗಿತ್ತು ದೇವಸ್ಥಾನಕ್ಕೆ ಬಂದು. ಸ್ವಾಮಿ ಇವತ್ತು ಮನಸ್ಸು ಕೊಟ್ರಾ? ಬನ್ನಿ. ನಿಮ್ಮ ಅತ್ತೆ ಕಾವೇರಮ್ಮ ಹೋಗೆಬಿಟ್ರು. ಮೊಮ್ಮಗನ್ನ ಡಾಕ್ಟರು ಓದ್ಸಿ, ಕೆಲ್ಸ ಕೊಡ್ಸಿ, ಮದುವೆ ಮಾಡಿ, ಅಪ್ಪ ಮೆಚ್ಚಬೇಕು... ಎಷ್ಟು ಹೊಗಳಿದ್ರೂ ಸಾಲ್ದು. ಆದರೂ ಗಟ್ಟಿಗಿತ್ತಿ ಪುಣ್ಯಾತ್ಗಿತ್ತಿ ಅಂತವರೆಲ್ಲ ಇನ್ನು ನಮ್ಮೂರಲ್ಲಿ ಹುಟ್ಟಲ್ಲ ಬಿಡಿ. ತಗೊಳ್ಳಿ ಮಂಗಳಾರತಿ.'

'ಏನ, ಒಬ್ರೆ ಮಾತಾಡ್ತಿದ್ರಿ?'

'ಏನಿಲ್ಲ ಭಟ್ರೆ. ಗಂಡು–ಹೆಣ್ಣು ಹೊಸ ಜೋಡಿ ನೋಡಿದೆ. ಹುಡುಗಿ ನಮ್ಮ ಸಕುಂತ ಇದ್ದಂಗೆ ಇದಳಲ ಅಂತ ಮನಸಲ್ಲಿ ಅಂದಕಂಡೆ. ಭ್ರಮೆ ಬುಡಬಕಲ ಭಟ್ರೆ, ಇರ್ಲಿ ನೀವು ಚನ್ನಾಗಿದೀರಾ? ಅಮ್ಮ ಹುಷಾರಾಗಿದರ?'

'ಎಲ್ಲ ಚೆನ್ನಾಗಿದೀವಿ ತಾಯಿ. ಇವತ್ತು ಶ್ರಾವಣ ಸೋಮವಾರ. ಹೇಗೋ ಬಂದಿದ್ದೀರಿ, ಮಹಾಮಂಗಳಾರತಿವರೆಗೆ ಇದ್ದು, ಪ್ರಸಾದ ತಗೊಂಡು ಹೋಗಿ.'

'ಆಗ್ಲಿ ಭಟ್ರೆ, ಆ ಕಂಬದತ್ರ ಕೂರ್ತೀನಿ.'

ಬಹು ಕಾಲದ ನಂತರ ದೇವಾಲಯಕ್ಕೆ ಬಂದಿದ್ದ ವಿಜಯಮ್ಮ ಆರಾಮವಾಗಿ ಕುಳಿತು ಸ್ವಾಮಿ ರಾಮೇಶ್ವರನನ್ನೇ ನೋಡುತ್ತ ಬದುಕಿನ ಪುಟಗಳನ್ನು ತಿರುವಿ ಹಾಕತೊಡಗಿದರು.

ಪಾಪ ನಮ್ಮ ಸಕುಂತ. ನಾನವಳ ಮುಖ ನೋಡಿ ಮೂವತ್ತು ವರ್ಷ ಕಳೆಯಿತು. ಈಗ ಅವಳು ಮೊದಲಿನಂತಿರಲಾರಳು. ಅವಳಿಗೂ ವಯಸ್ಸಾಯಿತಲ್ಲ. ಬೆಳಗ್ಗೆ ಆರು ಗಂಟೆಗೆ ಬಾಗಿಲು ಸಾರಿಸಿ ರಂಗೋಲಿ ಹಾಕುವಾಗ ಪ್ರತಿದಿನ ಅವಳು ನನ್ನನ್ನು ಕದ್ದು ನೋಡುತ್ತಾಳೆ. ನನ್ನ ನೋಡುವುದಕ್ಕಾಗಿಯೇ ಬಂದು ಮರೆ ನಿಲ್ಲುತ್ತಾಳೆ. ನನಗಿದು ಎಂದೋ ಗೊತ್ತು. ಆದರೆ ನಾನು ಮಾತ್ರ ಅವಳ ಮುಖ ನೋಡಲ್ಲ. ಮುಂದೆ ನೋಡುವುದೂ ಇಲ್ಲ. ಅಂದಿನ ಆ ಮುಖ, ಆ ಸಕುಂತಳೆ ನನಗೆ ಸಾಕು. ಈಗಿನ ಸಕುಂತ ನನಗೆ ಬೇಡವೇಬೇಡ.

ಸಕುಂತ ನನ್ನ ತಂಗಿ. ನನಗಿಂತ ಮೂರು ವರ್ಷ ಚಿಕ್ಕವಳು. ನನ್ನ ಪ್ರಾಣವಾಗಿದ್ದವಳು. ಅಪ್ಪ ಪ್ರೀತಿಯಿಂದ ಶಕುಂತಲ ಎಂದು ಹೆಸರಿಟ್ಟಿದ್ದರು. ಆದರೆ ನಾವೆಲ್ಲರು ಸಕುಂತ ಅಂತ ಕರೆದೆವು. ಅಕ್ಕಯ್ಯ ಅಕ್ಕಯ್ಯ ಅಂತ ನನ್ನ ಬೆನ್ನ ಹಿಂದೆ ಸುತ್ತುತ್ತಿದ್ದಳು. ನಾನೇ ಅವಳಿಗೆ ಸ್ನಾನ ಮಾಡಿಸಿ ಬಟ್ಟೆ ಹಾಕಿ ತಲೆ ಬಾಚಿ ಎರಡು ಜಡೆ ಹೆಣೆಯಬೇಕಿತ್ತು. ನಾನು ನಾಲ್ಕನೇ ಕ್ಲಾಸಿನಲ್ಲಿದ್ದಾಗ ಸಕುಂತ ಒಂದನೇ ಕ್ಲಾಸು. ಓದು–ಆಟ ಎಲ್ಲದರಲ್ಲೂ ನಾವಿಬ್ಬರೂ ಮುಂದು. ಊರು ಮನೆಯವರೆಲ್ಲ 'ಇದ್ದರೆ ಸಕುಂತ–ವಿಜಯ ಇದ್ದಂಗೆ ಇರಬೇಕು. ಚೆನ್ನದಂತ ಮಕ್ಕಳು' ಎನ್ನುತ್ತಿದ್ದರು.

ಬಾಲ್ಯ ಕಳೆದು ಯೌವನಕ್ಕೆ ಕಾಲಿಟ್ಟೆವು. ಈಗ ಊರಲೆಲ್ಲಾ ನಮ್ಮಿಬ್ಬರ ಸೌಂದರ್ಯದ್ದೇ ಮಾತು. 'ಎಷ್ಟು ಚನ್ನಾಗಿದ್ದಾರೆ ಅಕ್ಕತಂಗಿಯರು ಕೈ ತೊಳೆದು ಮುಟ್ಟಬೇಕು. ಒಂದು ರೂಪಾಯಿ ಖರ್ಚಿಲ್ಲದಂಗೆ ಮದುವೆ ಮಾಡಬಹುದು. ಹೆಣ್ಮಕ್ಕಳು ಇದ್ದರೆ ಹಿಂಗೆ ಇರ್ಬೇಕು' ಎನ್ನುತ್ತಿದ್ದರು. ಅವತ್ತು ಓದು ಡಿಗ್ರಿ ಫೈನಲ್ ಪರೀಕ್ಷೆ ಬರೆದು ಮನೆಗೆ ಬಂದಾಗ ನನ್ನ ಮದುವೆಯ ಮಾತುಕತೆ ನಡೆಯುತ್ತಿತ್ತು. 'ಮೊಗಾ ವಿಜಿಯ, ನಾಳೆ ಗಂಡಿನ ಕಡೇರು ಬರ್ತಾರಂತೆ. ಒಳ್ಳೆ ನೆಂಟ್ರು ಮತ್ತೆ ನಂಟುಸ್ತಾನ. ಒಬ್ಬನೆ ಮಗ, ಆಸ್ತಿವಂತರು. ತಾಯಿ ಇದಾರಂತೆ, ಕಾವೇರಮ್ಮ ಅಂತ. ತಂದೆ ಇಲ್ಲ. ಹುಡುಗ ಬಿಎಸ್ಸಿ ಅಗ್ರಿಕಲ್ಚರ್ ಚೆನ್ನಾಗಿ ಓದಿದಾನೆ. ಆದರೆ ಒಬ್ಬನೇ ಮಗ ಅಂತ ಕೆಲ್ಸಕ್ಕೆ ಕಳ್ಸಿಲ್ಲ. ಹುಡುಗ ತುಂಬಾ ಚೆನ್ನಾಗಿದನಂತೆ. ಹೆಸರು ಶಶಿಧರ ಅಂತ'. ಅಪ್ಪಯ್ಯ ಬಹಳ ಸಂತೋಷದಿಂದ ಹೇಳಿದ್ದರು..

'ಅಕ್ಕಯ್ಯ ನಾಳೆ ಗಂಡಿನ ಕಡೇರು ಬರ್ತಾರಂತೆ. ನಾನೆ ನಿಂಗೆ ಡ್ರೆಸ್ ಮಾಡ್ತೀನಿ. ನಾಕು ಗಂಟೆಗೆ ಏಳನ ಸೂಜಿಮಲ್ಲಿಗೆ ಹೂವ ನಾನೇ ಕಟ್ಟುತ್ತೀನಿ. ಕೇಸರಿಬಾತು ಉಪ್ಪಿಟ್ಟು ನಾನೆ ಮಾಡ್ತೀನಿ. ನೋಡ್ತಾ ಇರು' ಎನ್ನುತ್ತಾ ಸಕುಂತ ಮನೆ ತುಂಬಾ ಓಡಾಡಿದ್ದಳು. ನನಗೆ ಮಾತ್ರ ರಾತ್ರಿ ಇಡೀ ನಿದ್ದೆ ಇಲ್ಲ. ಬರಲಿರುವ ಗಂಡಿನ ಕಾಣದ ಮುಖದ ಬಗ್ಗೆ ಯೋಚಿಸತೊಡಗಿದೆ.

ಶಶಿಧರ, ಎಷ್ಟು ಚಂದದ ಹೆಸರು. ಹಾಗೇ ಮೆಲ್ಲನೆ ಕಣ್ ಮುಚ್ಚಿದೆ ಎಲ್ಲೋ ಕನಸಿನಲ್ಲಿ ತೇಲಾಡಿದಂತೆ. ಅದೊಂದು ಸುಂದರವಾದ ದಿನ ಸೂರ್ಯ ತನ್ನ ಹೊಂಗಿರಣಗಳನ್ನು ಭೂಲೋಕಕ್ಕೆ ಕಳುಹಿಸುವ ತರಾತುರಿಯಲ್ಲಿದ್ದಾನೆ. .ನಾನು ಮರವೊಂದನ್ನು ಗಮನವಿಟ್ಟು ನೋಡಿದೆ. ಮರದ ಹೂವು ಎಲೆಗಳು ಜೀವಂತ ಬಣ್ಣಗಳಿಂದ ತುಂಬಿ ಹೊಳೆಯಲಾರಂಭಿಸಿದವು. ಇದೀಗ ಅಪೂರ್ವ ಶಾಂತಿಯೊಂದು ನನ್ನನ್ನು ಆವರಿಸತೊಡಗಿತು. ಮರವನ್ನು ಪ್ರೀತಿ ಅಕ್ಕರೆಗಳಿಂದ ನೋಡುತ್ತಿದ್ದೆ. ಅದು ಮೌನವಾಗಿ ಉಸಿರಾಡುತ್ತಿತ್ತು. ಹೊಸ ಚಿಗುರು ಎಲೆ ಮೊಗ್ಗು ಹೂಗಳಿಂದ ಶೋಭಿಸುತ್ತಿತ್ತು. ಬಳ್ಳಿಯೊಂದು ಮರವನ್ನು ಸುತ್ತುವರಿದು ಮೇಲೇರುತ್ತಿತ್ತು.

'ಅಕ್ಕಯ್ಯ ಅಕ್ಕಯ್ಯ... ಗಂಟೆ ಆರೂವರೆ, ಏಳು ಏಳು... ಅಮ್ಮ ಕರಿತಿದೆ. ಏಳಕ್ಕಯ್ಯ' – ನಾನು ಕನಸು ತಿಳಿದೆದ್ದು ಬರುವ ಗಂಡಿಗಾಗಿ ಕಾಯತೊಡಗಿದೆ. ಕಡೆಗೂ ಗಂಡು, ಅವನ ಸೋದರಮಾವ, ತಾಯಿ ಮುಂತಾದವರೆಲ್ಲ ಬಂದರು. ನಾನು ಕಿಟಕಿಯ ಪರದೆ ಸರಿಸಿ ನೋಡಿದೆ. ನಮ್ಮ ಸಕುಂತ 'ಅಕ್ಕಯ್ಯ, ಅವನೆ ಗಂಡು, ನೋಡು ನೋಡು' ಎಂದಳು.

ಮೀಡಿಯಂ ಪರ್ಸನಾಲಿಟಿ. ಬಿಳಿಯ ಬಣ್ಣ, ನೀಳ ಮೂಗು, ಆಕರ್ಷಕ ಕಣ್ಣುಗಳು. ಕೆಂಪು ಬಿಳಿ ಪಟ್ಟೆಯ ಫುಲ್ ಸ್ಲೀವ್ ಶರಟು. ಅದಕ್ಕೊಪ್ಪುವ ಕಪ್ಪು ಪ್ಯಾಂಟು, ಕತ್ತಿನಲ್ಲೊಂದು ಚಿನ್ನದ ಸರ. ಎಷ್ಟು ಚೆನ್ನಾಗಿದ್ದಾನೆ. ಮನಸಿನಲ್ಲಿ ನೂರು ಸಲ ಅಂದುಕೊಂಡೆ. ಹೊರಗೆ ಶೂ ಬಿಚ್ಚಿಟ್ಟು ಕಾಲು ತೊಳೆದು ಬಾಗಿಲು ದಾಟಿ ಒಳ ಬಂದು ಎಲ್ಲರಿಗೂ ನಮಸ್ಕರಿಸಿ ಕುಳಿತ ಆ ರೀತಿ ನೀತಿ ಇದೆಯಲ್ಲ ದೇವರೆ ನಾನು ಮೊದಲಿಗೆ ನೀರು ಕೊಟ್ಟು, ನಂತರ ಉಪ್ಪಿಟ್ಟು–ಕಾಫಿ ಕೊಟ್ಟು ಒಳಬಂದೆ. ನಮ್ಮ ಸಕುಂತ ಸದ್ದುಗದ್ದಲವಿಲ್ಲದೆ ಅಡಗಿಕೊಂಡಿದ್ದಳು..

ಸರಿ, ಮದುವೆ ನಿಶ್ಚಯವಾಯಿತು. ಲಗ್ನಪತ್ರಿಕೆಯನ್ನು ಸಿಂಪಲ್ಲಾಗಿ ದೇವಸ್ಥಾನದಲ್ಲಿ ಬರೆಸಿದೆವು. ಮದುವೆಯ ದಿನ ಓಡೋಡಿ ಬಂತು. ನನಗೆ ನಮ್ಮಮ್ಮ ಒಬ್ಬರೇ ಅಮ್ಮ ಅಲ್ಲ. ತಾಯಿ ಪ್ರೀತಿ ನನಗೆ ಎಷ್ಟೋ ಜನರಿಂದ ಸಿಕ್ಕಿದೆ. ಚಿಕ್ಕಮ್ಮಂದಿರು, ದೊಡ್ಡಮ್ಮಂದಿರು, ಅತ್ತೆಯರು ಊರುಮನೆಯ ಅಮ್ಮಂದಿರು, ಎಲ್ಲಾ ಸೇರಿ ನನ್ನ ಮೈಮೇಲೆ ಚಿನ್ನ ಹೇರಿಬಿಟ್ಟರು. ಗೆಜ್ಜಡಿಕೆ, ಕಟ್ಟಾಣಿ, ಸರ, ಪಟ್ಟಿ, ತೋಳಬಂದಿ, ತುರುಬಿನ ಹೂವ, ಸೈಕಲ್ ಚೈನು, ಗುಂಡಿನ ಸರ, ಬೈತಲೆಬೊಟ್ಟು, ಕೆನ್ನೆ, ಸರಪಳಿ, ವಾಲೆ ಜುಮುಕಿ, ಬುಗುಡಿ, ಕಾಸಿನ ಸರ, ಮಾಟಿ, ಮುತ್ತು, ಹವಳದ ಬುರುಜಿನ